ವರ್ಷ	ಮೊತ್ತ	ಒಟ್ಟು ಹಣ
1987	3000 2	6,000-00
1988	3000 2	6,000-00
1989	3000 2	6,000-00
1990	3000 2	6,000-00
1991	3000 1	3,000-00
1992	4000 2	8,000-00
1993	4000 1	4,000-00
1994	4000 3	12,000-00
1995	5000 1	5,000-00
1996	5000 3	15,000-00
1997	5000 1	5,000-00
	ಒಟ್ಟು ಹಣ	**95,000-00**

ಮೈಸೂರು ನಗರದ ಜ್ಯೋತಿನಗರದ ಒಳಚರಂಡಿ ವ್ಯವಸ್ಥೆ

799 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಮೈಸೂರು ನಗರದ ಜ್ಯೋತಿನಗರದ ಪೋಲೀಸ್ ವಸತಿಗೃಹ ಎ ಮತ್ತು ಬಿ ಬ್ಲಾಕ್ ಜಲಪುರಿ ಪೋಲೀಸ್ ವಸತಿಗೃಹ ಎ,ಬಿ, ಮತ್ತು ಸಿ ಬ್ಲಾಕ್ ಹಾಗೂ 3ನೇ ಇನ್‌ಫೆಂಟ್ರಿ ಲೈನ್ ವಸತಿಗೃಹಗಳ ರಸ್ತೆ, ಚರಂಡಿ ಹಾಗೂ ಒಳಚರಂಡಿಗಳು ಸುಮಾರು 40 ವರ್ಷಗಳಿಂದ ದುರಸ್ಥಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುಲಾಗುವುದು, ಯಾವಾಗ ಮುಗಿಸಲಾಗುವುದು ?*

ಇ) *ಈ ಕಾಮಗಾರಿಯನ್ನು ವಿಳಂಬ ಮಾಡುತ್ತಿರುವ ಅಧಿಕಾರಗಳ ಮೇಲೆ ಶಿಸ್ತು ಕ್ರಮವನ್ನು ಕೈಗೊಳ್ಳಲಾಗುವುದೇ ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ. ಮೈಸೂರಿನಲ್ಲಿ ಒಟ್ಟು 995 ಪೋಲೀಸ್ ವಸತಿಗೃಹಗಳು ಪ್ರಶ್ನೆಯಲ್ಲಿ ಸೂಚಿಸಿದ ಮೂರು ಸ್ಥಳಗಳಲ್ಲಿರುತ್ತವೆ. ಈ ವಸತಿ ಗೃಹಗಳಿಗೆ ಲಭ್ಯವಿರುವ ವಾರ್ಷಿಕ ಅನುದಾನ ಒಟ್ಟು

1,13,100.00 ರೂ.ಗಳಿದ್ದು ಇದರಲ್ಲಿ ಕಟ್ಟಡಗಳ ಆದ್ಯ ದುರಸ್ತಿಗಳನ್ನು ಮಾಡಲಾಗುತ್ತಿದೆ. ಆದ್ದರಿಂದ ರಸ್ತೆ ಚರಂಡಿ ಮತ್ತು ಒಳಚರಂಡಿಗಳ ದುರಸ್ತಿಯನ್ನು ಕೈಗೊಳ್ಳಲಾಗಿರುವುದಿಲ್ಲ.

ಅ) ಮೇಲಿನ ಪರಿಸ್ಥಿತಿಯನ್ನು ಗಮನಿಸಿ, ಪೋಲೀಸ್ ವಸತಿಗೃಹಗಳ ದುರಸ್ತಿಗಾಗಿ 1997-98ನೇ ಸಾಲಿಗೆ 367.50 ಲಕ್ಷ ರೂ.ಗಳನ್ನು ಹಾಗೂ 1998-99ನೇ ಸಾಲಿಗೆ 388 ಲಕ್ಷ ರೂ.ಗಳನ್ನು ಪೋಲೀಸ್ ಇಲಾಖೆಯ ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಬಗ್ಗೆ ಪೋಲೀಸ್ ಇಲಾಖೆಯಿಂದ ಕ್ರಮ ತೆಗೆದಕೊಳ್ಳಬೇಕಾಗಿದೆ.

ಇ) ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಕ್ರೀಡೆಗಳಿಗೆ ಟೆಂಡರ್

800 - ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ 1997 ಜೂನ್‌ನಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವಾಗ ಕ್ರೀಡಾಂಗಣಗಳ ಟೆಂಡರ್ (ಗುತ್ತಿಗೆ) ಕರೆಯುವಾಗ ಕಾಮಗಾರಿಗಳಿಗೆ ಅಂದಾಜಿಸಲಾದ ಒಟ್ಟು ಮೊತ್ತವೆಷ್ಟು ?

ಆ) ಮೈಸೂರಿನ ಟೆಂಡರ್‌ದಾರರಿಗೆ ಪೂರ್ಣ ಹಣ ಸಂದಾಯವಾಗಿದಯೇ ? ಸಂದಾಯವಾಗಿಲ್ಲದಿದ್ದಲ್ಲಿ ಯಾವಾಗ ಪೂರ್ಣ ಹಣ ಪಾವತಿಸಲಾಗುವುದು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ಹಾಗೂ ಯುವಜನ ಸೇವಾ ಕ್ರೀಡಾ ಸಚಿವರು) :

ಅ) ಪ್ರತಿ ಕೆಲಸದ ಅಂದಾಜು ವೆಚ್ಚದ ವಿವರಗಳನ್ನು ಅನುಬಂಧ - 1ರಲ್ಲಿ ಒದಗಿಸಲಾಗಿದೆ.

ಆ) ಪೂರ್ಣ ಹಣ ಸಂದಾಯವಾಗಿರುವುದಿಲ್ಲ. ಹಣ ಬಿಡುಗಡೆಯಾದ ಕೂಡಲೇ ಪಾವತಿಸಲಾಗುವುದು.